2016 ಕ.ತೀ.ವ. 712

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಅಬ್ದುಲ್ ಸಿದ್ಧಿಕ್ ಮತ್ತು ಇನ್ನೊಬ್ಬರು –ವಿರುದ್ಧ– ಯು.ಎಫ್.ಎಂ. ಉದಯ್ *

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಕಾಲಪರಿಮಿತಿ ಅಧಿನಿಯಮ, 1963

ಕಾಲಪರಿಮಿತಿ ಅಧಿನಿಯಮದಿಂದ ದಾವೆಯು ಪ್ರತಿಷೇಧಿತವಾಗಿದೆಯೆಂದು ವಾದಪತ್ರ ವಜಾ ಕೋರಿ ಪ್ರತಿವಾದಿಗಳು ಸಲ್ಲಿಸಿದ್ದ ಮೂಲ ದಾವೆಯನ್ನು ವಜಾಗೊಳಿಸಿದ ಆದೇಶವನ್ನು ಪ್ರಸ್ತುತ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ.

ಕಾಲಪರಿಮಿತಿ ಅಧಿನಿಯಮದ 58 ಮತ್ತು 65ನೇ ಅನುಚ್ಛೇದಗಳ ಉಪಬಂಧಗಳನ್ನು ಪೂರ್ಣವಾಗಿ ಪರಿಗಣನೆಗೆ ತೆಗೆದುಕೊಂಡು ಈ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಆಧಾರದಲ್ಲಿ ಪ್ರಸ್ತುತ ಮೊಕದ್ದಮೆಯ ಸಂಗತಿಗಳು ಹಾಗೂ ಸನ್ನಿವೇಶಗಳಿಗೆ ಕಾಲ ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದದ ಉಪಬಂಧಗಳು ಮಾತ್ರ ಅನ್ವಯವಾಗುತ್ತಿದ್ದು 58ನೇ ಅನುಚ್ಛೇದ ಉಪಬಂಧಗಳು ಅನ್ವಯವಾಗುವುದಿಲ್ಲವೆಂದು, ಕಾಲಪರಿಮಿತಿಯೆಂದು ಪ್ರಸ್ತುತ ದಾವೆಯು ಪ್ರತಿಷೇದಿತವಾಗುವುದಿಲ್ಲವೆಂದು ಅಭಿಪ್ರಾಯಪಟ್ಟು ಪ್ರಸ್ತುತ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

* ರಿಟ್ ಅರ್ಜಿ ಸಂಖ್ಯೆ: 101539/2014 (ಜಿಎಂ–ಸಿಪಿಸಿ), ದಿನಾಂಕ: 26ನೇ ಜೂನ್, 2015.

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. 2010(4) ಕೆಸಿಸಿಆರ್ 2648 ಮೆಸರ್ಸ್ ಎಲೆಕ್ಟ್ರಾನಿಕ್ಸ್ ಅಂಡ್ ಕಂಟ್ರೋಲ್ಸ್, ಬೆಂಗಳೂರು ಅದರ ಕಾನೂನು ವಾರಸುದಾರರು –ವಿರುದ್ಧ– ಕೆಐಎಡಿಬಿ* | *(ಉಲ್ಲೇ) 12* |
| *2. 2000 (3) ಕೆಸಿಸಿಆರ್ 2223 ಜಿ.ಪಿ.ಲಕ್ಷ್ಮಿ ಮತ್ತು ಮತ್ತೊಬ್ಬರು –ವಿರುದ್ಧ– ಟಿ.ಬಿ. ರಾಜಮ್ಮ ಮತ್ತು ಇತರರು* | *(ಉಲ್ಲೇ) 12* |
| *3. ಎಐಆರ್ 2000 ಎಸ್‌ಸಿ 1099 ಮಹಾರಾಷ್ಟ್ರ ರಾಜ್ಯ –ವಿರುದ್ಧ– ಪ್ರವೀಣ್ ಜೋತಲಾಲ್ ಕಮ್‌ದಾರ್ (ಕಾನೂನು ಸಮ್ಮತ ವಾರಸುದಾರರು)* | *(ಉಲ್ಲೇ) 13* |

ಅರ್ಜಿದಾರರ ಪರ : ಶ್ರೀ ಶಾಂತೇಶ್ ಅವಾಜಿ, ವಕೀಲರ ಪರವಾಗಿ
ಶ್ರೀ ಎಂ.ಬಿ. ಹಿರೇಮಠ್
ಸಿ.ಆರ್. ಪರ : ಶ್ರೀ ಎ.ಎಸ್. ಪಾಟೀಲ್, ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ :**

ಅರ್ಜಿದಾರರು/ಪ್ರತಿವಾದಿಗಳು ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಕಾರವಾರ ಇವರ ಕಡತದ ಮೇಲಿನ ಒ.ಎಸ್.ಸಂ.17/2012ರಲ್ಲಿ ರೂಪಿಸಿದ ಮಧ್ಯಕಾಲೀನ ಅರ್ಜಿ ಸಂ.1/2014ರ ಮೇಲೆ 02.01.2014ರಂದಿನ ಆದೇಶದಿಂದ ಬಾಧಿತರಾಗಿರುತ್ತಾರೆ.

2. ಪ್ರತ್ಯರ್ಜಿದಾರ/ವಾದಿಯು ತಾನೇ ದಾವಾ ಅನುಸೂಚಿತ ಸ್ವತ್ತಿನ ಮಾಲೀಕನೆಂದು ವಾದಿಸಿ, ದಾವಾ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿನ ಘೋಷಣೆ ಮತ್ತು ಅಧಿಭೋಗಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳಾಗಿರುವಂಥ ಪ್ರಸ್ತುತ ಅರ್ಜಿದಾರರ ವಿರುದ್ಧ ಒ.ಎಸ್.ಸಂ.17/2012ನ್ನು ಸಲ್ಲಿಸಿರುತ್ತಾನೆ. ಪ್ರತಿವಾದಿಗಳು, ಇಡೀ ವಾದಪತ್ರದ ದೃಢೋಕ್ತಿಗಳನ್ನು ನಿರಾಕರಿಸಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿ, ದಾವೆಯನ್ನು ವಜಾಗೊಳಿಸಲು ಕೋರಿಕೆ ಸಲ್ಲಿಸಿರುತ್ತಾರೆ.

3. ಸಾಕ್ಷ್ಯಕ್ಕಾಗಿ ವಿಷಯವನ್ನು ಕಾಯ್ದಿರಿಸಿರುವಾಗ, ಪರಿಮಿತಿಯ ಕಾನೂನಿನಿಂದ ದಾವೆಯು ನಿಷೇಧಿತವಾಗಿದೆಯೆಂದು ವಾದಪತ್ರವನ್ನು ತಿರಸ್ಕರಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 151ನೇ ಪ್ರಕರಣದೊಂದಿಗೆ ಓದಲಾದ 11(ಡಿ) ನಿಯಮ VII ಕ್ರಮಾದೇಶದಡಿಯಲ್ಲಿ ಪ್ರತಿವಾದಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಾದಿಯಿಂದ ಪ್ರತಿರೋಧಿಸಲಾಗಿರುತ್ತದೆ. ಇಬ್ಬರೂ ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ, ಮಾನ್ಯ ಸಿವಿಲ್ ನ್ಯಾಯಾಧೀಶರು, ದಿನಾಂಕ 02.10.2014ರ ಪ್ರಶ್ನಿತ ಆದೇಶದ ಮೂಲಕ, ದಾವೆಯು ಊರ್ಜಿತವಾಗಿದೆ ಮತ್ತು ಪ್ರತಿವಾದಿಗಳು, ಪರಿಮಿತಿಯ ಮೂಲಕ ನಿಷೇಧಿಸುವಂತೆ ದಾವೆಯನ್ನು ವಜಾ ಮಾಡುವುದಕ್ಕೆ ಯಾವುದೇ ಆಧಾರವನ್ನು ರೂಪಿಸಿರುವುದಿಲ್ಲವೆಂದು ಅಭಿಪ್ರಾಯಪಟ್ಟು ಅರ್ಜಿಯನ್ನು ವಜಾಗೊಳಿಸಿರುತ್ತಾರೆ. ಸದರಿ ಆದೇಶದ ವಿರುದ್ಧ ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

4. ದಾವೆಯ ಪಕ್ಷಕಾರರ ಪರ ಮಾನ್ಯ ವಕೀಲರ ವಾದವನ್ನು ನಾನು ಆಲಿಸಿರುತ್ತೇನೆ.

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಮಾನ್ಯ ಶ್ರೀ ಶಾಂತೇಶ್ ಅವೇಜ್‌ರವರ ಪರವಾಗಿ ಹಾಜರಾದ ಶ್ರೀ ಎಂ.ಬಿ. ಹಿರೇಮಠ್‌ರವರು, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು, ಮೂರು ವರ್ಷಗಳ ಒಳಗೆ ದಾವೆಯನ್ನು ಸಲ್ಲಿಸದಿರುವಾಗ, ಪರಿಮಿತಿ ಅಧಿನಿಯಮ, 1963ರ 58ನೇ ಅನುಚ್ಛೇದದ

ಉಪಬಂಧಗಳಿಗೆ ವಿರುದ್ಧವಾದುದಾಗಿರುತ್ತದೆಂದು ವಾದಿಸಿರುತ್ತಾರೆ. ಆದ್ದರಿಂದ ಅಧಿವಿಚಾರಣಾ ನ್ಯಾಯಾಲಯವು ಪ್ರಶ್ನಿತ ಆದೇಶವನ್ನು ದೋಷಪೂರ್ಣವಾಗಿ ಹೊರಡಿಸಿರುತ್ತದೆ. ಇದು ರದ್ದುಪಡಿಸಲು ತಕ್ಕದ್ದಾಗಿದೆ. ತದನುಸಾರವಾಗಿ, ಈತ ರಿಟ್ ಅರ್ಜಿಯನ್ನು ಅಂಗೀಕರಿಸಲು ಕೋರಿರುತ್ತಾರೆ.

6. ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರ/ಆಕ್ಷೇಪಕನ ಪರ ಮಾನ್ಯ ನ್ಯಾಯವಾದಿ ಶ್ರೀ ಎ.ಎಸ್. ಪಾಟೀಲ್ ಪ್ರಶ್ನಿತ ಆದೇಶವನ್ನು ಊರ್ಜಿತಗೊಳಿಸಲು ಕೋರಿರುತ್ತಾರೆ.

7. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದವಿವಾದಗಳನ್ನು ನನ್ನ ವಿವೇಚನೆಯಿಂದ ಪರಿಗಣಿಸಿ, ದಾಖಲೆಯ ಮೇಲಿನ ಎಲ್ಲಾ ವಿಷಯವನ್ನು ಪರಿಶೀಲಿಸಲಾಗಿರುತ್ತದೆ.

8. ಈ ರಿಟ್ ಅರ್ಜಿಯಲ್ಲಿ ನನ್ನ ಪರಿಗಣನೆಗಾಗಿ ಉದ್ಭವಿಸಿದ ಒಂದೇ ಅಂಶವೆಂದರೆ,

> "ವಾದಿಯು ಸಲ್ಲಿಸಿರುವ ದಾವೆಯು ಕಾಲವನ್ನು ಮೀರಿರುವುದಾಗಿದೆಯೇ?"

9. ಆತ ನೋಂದಾಯಿತ ಉಯಿಲು ಮತ್ತು ಇತರೆ ಸಮಕಾಲೀನ ದಾಖಲೆಗಳ ಆಧಾರದ ಮೇಲೆ ದಾವಾ ಅನುಸೂಚಿತ ಸ್ವತ್ತಿನ ಮಾಲೀಕನಾಗಿರುತ್ತಾನೆಂದು ವಾದಿಸಿ, ಅಧಿಭೋಗದ ಪರಿಹಾರ ಮತ್ತು ತತ್ಪರಿಣಾಮದ ಪರಿಹಾರದ ಘೋಷಣೆಗೆ ಸಂಬಂಧಿಸಿದಂತೆ ವಾದಿಯು ದಾವೆಯನ್ನು ಸಲ್ಲಿಸಿರುತ್ತಾನೆಂಬುದು ಒಪ್ಪಿಕೊಂಡ ವಾಸ್ತವಾಂಶಗಳಾಗಿರುತ್ತವೆ. ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ದಾಖಲಿಸಿ ವಾದಿಯ ಸ್ವತ್ತಿನ ಸ್ವಾಮ್ಯವನ್ನು ನಿರಾಕರಿಸಿರುತ್ತಾರೆ ಮತ್ತು 19.04.2004 ದಿನಾಂಕದ ಆಪಾದಿತ ಉಯಿಲಿನ ಆಧಾರದ ಮೇಲೆ ವಾದಿಗಳು ಅಧಿಭೋಗವನ್ನು ಪಡೆದಿರುತ್ತಾರೆಂಬುದು ಅವರ ನಿರ್ದಿಷ್ಟ ವಾದವಾಗಿರುತ್ತದೆ.

10. ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದದಡಿಯಲ್ಲಿ, ಸ್ಥಿರಾಸ್ತಿಯ ಅಥವಾ ಅದರಲ್ಲಿನ ಸ್ವಾಮ್ಯದ ಮೇಲೆ ಆಧರಿಸಿದ ಯಾವುದೇ ಹಿತಾಸಕ್ತಿಯ ಸಂಬಂಧದಲ್ಲಿನ ಅಧಿಭೋಗಕ್ಕಾಗಿ ದಾವೆಯನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಮಿತಿಯ ಅವಧಿ ಪ್ರತಿವಾದಿಗಳ ಅಧಿಭೋಗವು ವಾದಿಗಳಿಗೆ ಪ್ರತಿಕೂಲವಾದ ದಿನಾಂಕದಿಂದ 12 ವರ್ಷಗಳಾಗಿರುತ್ತವೆ. ಪರಿಮಿತಿ ಅಧಿನಿಯಮದ 58ನೇ ಅನುಚ್ಛೇದವು, ಘೋಷಣೆಯನ್ನು ಪಡೆಯಲು ದಾವೆ ಸಲ್ಲಿಸುವ ಹಕ್ಕನ್ನು ಮೊದಲು ಪಡೆದಾಗ ಆ ದಿನಾಂಕದಿಂದ ಮೂರು ವರ್ಷಗಳ ಮಿತಿಯನ್ನು ನಿರ್ದಿಷ್ಟಪಡಿಸುತ್ತದೆ.

11. ಅನುಚ್ಛೇದ 58 ಮತ್ತು 65ರ ಎರಡೂ ಉಪಬಂಧಗಳನ್ನು ಓದಿದಾಗ, ಸ್ವಾಮ್ಯದ ಮೇಲೆ ಆಧರಿಸಿದ ಸ್ಥಿರಾಸ್ತಿಯ ಅಧಿಭೋಗಕ್ಕೆ ಸಂಬಂಧಿಸಿದಂಥ ಮಿತಿಯ ಪ್ರತಿವಾದಿಗಳ ಅಧಿಭೋಗವು ವಾದಿಗಳಿಗೆ ಪ್ರತಿಕೂಲವಾದಾಗ ಅದು 12 ವರ್ಷಗಳಾಗಿರುತ್ತದೆಂಬುದು ಸ್ಪಷ್ಟವಾಗಿರುತ್ತದೆ. ದಾವೆ ಸಲ್ಲಿಸುವ ಹಕ್ಕು ಮೊದಲು ದೊರೆತಾಗ ಸ್ವಾಮ್ಯಕ್ಕಿಂತ ಯಾವುದೇ ಇತರೆ ಘೋಷಣೆ ಪಡೆಯಲು ಮೂರು ವರ್ಷಗಳಾಗಿರುತ್ತವೆ. ಹಾಗಾಗಿ, ಪ್ರಸ್ತುತ ಸಂದರ್ಭದ ವಾಸ್ತವಾಂಶಗಳು ಮತ್ತು ಸಂದರ್ಭಗಳಲ್ಲಿ ಕೇವಲ ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದವು ಮಾತ್ರ ಅನ್ವಯವಾಗುತ್ತಿದ್ದು, 58ನೇ ಅನುಚ್ಛೇದವು ಅನ್ವಯವಾಗುವುದಿಲ್ಲ.

12. ಅಧಿವಿಚಾರಣಾ ನ್ಯಾಯಾಲಯವು, ಪ್ರಶ್ನಿತ ಆದೇಶವನ್ನು ಹೊರಡಿಸುವಾಗ, ಸ್ವತ್ತಿನ ಸ್ವಾಮ್ಯ ಮತ್ತು ತತ್ಪರಿಣಾಮದ ಪರಿಹಾರವನ್ನು ಘೋಷಿಸುವುದಕ್ಕೆ ಸಂಬಂಧಿಸಿದಂತೆ ವಾದಿಯು ಸಲ್ಲಿಸಿರುವ ಪ್ರಸ್ತುತ ದಾವೆಯನ್ನು ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದದಿಂದ ನಡೆಸಬೇಕೇ ಹೊರತು 58ನೇ ಅನುಚ್ಛೇದದಿಂದಲ್ಲವೆಂಬ ನಿರ್ಣಯವನ್ನು ನಿರ್ದಿಷ್ಟವಾಗಿ ದಾಖಲಿಸಿರುತ್ತದೆ. ಈ ಸಂಬಂಧದಲ್ಲಿ ***ಮೆಸರ್ಸ್ ಎಲೆಕ್ಟ್ರಾನಿಕ್ಸ್ ಅಂಡ್ ಕಂಟ್ರೋಲ್ಸ್, ಬೆಂಗಳೂರು ಅದರ ಕಾನೂನು ವಾರಸುದಾರರು –ವಿರುದ್ಧ– ಕೆಐಎಡಿಬಿ*** [1], ಪ್ರಕರಣದಲ್ಲಿ ಈ ನ್ಯಾಯಾಲಯದ

1. 2010(4) ಕೆಸಿಸಿಆರ್ 2648

ಸೂಕ್ತಿಯನ್ನು ಹಾಗೆಯೇ ವರದಿಯಾಗಿರುವ ***ಜಿ.ಪಿ.ಲಕ್ಷ್ಮಿ ಮತ್ತು ಮತ್ತೊಬ್ಬರು –ವಿರುದ್ಧ– ಟಿ.ಬಿ. ರಾಜಮ್ಮ ಮತ್ತು ಇತರರು*** [2], ಪ್ರಕರಣದಲ್ಲಿನ ಈ ನ್ಯಾಯಾಲಯದ ನಿರ್ಣಯದ ಮೇಲೂ ಸಹಾ ಅವಲಂಬಿತವಾಗಿದ್ದು, ಅದರಂತೆ, ಅಧಿಭೋಗದ ಸ್ವಾಮ್ಯ ಮತ್ತು ತತ್ಪರಿಣಾಮದ ಪರಿಹಾರದ ಘೋಷಣೆಗೆ ವಾದಿಯು ಸಲ್ಲಿಸಿದ ಪ್ರಸ್ತುತ ದಾವೆಗೆ ಅನುಚ್ಛೇದ 65ನ್ನು ಅನ್ವಯಿಸಬೇಕು ಮತ್ತು ಪರಿಮಿತಿಯು 12 ವರ್ಷಗಳಾಗಿರುತ್ತದೆ. ಆದ್ದರಿಂದ, ದಾವೆಯು ಊರ್ಜಿತವಾಗಿರುತ್ತದೆ ಮತ್ತು ತದನುಸಾರವಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 11(ಡಿ) ನಿಯಮದ VIIನೇ ಕ್ರಮಾದೇಶದಡಿಯಲ್ಲಿ ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.

13. ಪರಿಮಿತಿ ಅಧಿನಿಯಮದ 65 ಮತ್ತು 58ನೇ ಅನುಚ್ಛೇದಗಳ ಉಪಬಂಧಗಳನ್ನು ಪರಿಗಣಿಸುವಾಗ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಮಹಾರಾಷ್ಟ್ರ ರಾಜ್ಯ –ವಿರುದ್ಧ– ಪ್ರವೀಣ್ ಜೇತಲಾಲ್ ಕಮ್‌ದಾರ್ (ಕಾನೂನು ಸಮ್ಮತ ವಾರಸುದಾರರು)*** [3], ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "5. . . . . . . . . . . . ಶೂನ್ಯ ದಸ್ತಾವೇಜುಗಳನ್ನು ಅನುಸರಿಸಿ ಅಪೀಲುದಾರರು ಅಧಿಭೋಗವನ್ನು ತೆಗೆದು ಕೊಂಡಿರುವಾಗ, ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದವನ್ನು ಅನ್ವಯ ಮಾಡಬೇಕು ಮತ್ತು ದಾವೆ ಸಲ್ಲಿಸುವ ಪರಿಮಿತಿಯು 12 ವರ್ಷಗಳಾಗಿರುತ್ತವೆ. ಶೂನ್ಯ ಮತ್ತು ರಿಕ್ತವಾಗಿರುವ ಈ ದಸ್ತಾವೇಜುಗಳನ್ನು ಅಲಕ್ಷಿಸಿ, ಅಧಿಭೋಗಕ್ಕೆ ಸಂಬಂಧಿಸಿದ ದಾವೆಯನ್ನು ಭೇಷರತ್ತಾಗಿ ಸಲ್ಲಿಸಬಹುದಾಗಿರುತ್ತದೆ ಮತ್ತು ದಾವೆಯನ್ನು ಮುನ್ನಡೆಸುವ ಸಮಯದಲ್ಲಿ, ಈ ದಸ್ತಾವೇಜುಗಳು ಶೂನ್ಯವಾದವುಗಳೆಂದು ವಾದಿಸಬಹುದಾಗಿರುತ್ತದೆ. ಅಜುದ್ ರಾಜ್ ಮತ್ತು ಇತರರು –ವಿರುದ್ಧ– ಮೋತಿ ಬಿನ್ ಮುಸಾದಿ ಪ್ರಕರಣದಲ್ಲಿ ಈ ನ್ಯಾಯಾಲಯವು, ಅಧಿಕಾರ ವ್ಯಾಪ್ತಿಯಿಲ್ಲದೆ ಆದೇಶವನ್ನು

2. 2000 (3) ಕೆಸಿಸಿಆರ್ 2223

3. ಎಐಆರ್ 2000 ಎಸ್‌ಸಿ 1099

ಹೊರಡಿಸಿದ್ದಲ್ಲಿ, ಇದನ್ನು ಶೂನ್ಯವಾಗಿದೆಯೆಂದು ಅಲಕ್ಷಿಸಬಹುದಾಗಿರುತ್ತದೆ, ಎಂದರೆ, ಕಾನೂನಿನ ದೃಷ್ಟಿಯಲ್ಲಿ ಅಸ್ಥಿತ್ವ ಉಳಿಸಿಕೊಳ್ಳದ ಹಾಗೂ ರದ್ದುಪಡಿಸುವ ಅವಶ್ಯಕತೆಯಿಲ್ಲದ, ಅಂಥ ದಾವೆಯನ್ನು ಪರಿಮಿತಿ ಅಧಿನಿಯಮದ 65ನೇ ಅನುಚ್ಛೇದದಿಂದ ನಡೆಸಬಹುದಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ದಾವೆ ಹೂಡಲು ಕಾಲವು ಮೀರಿದೆ ಎಂಬ ವಾದದಲ್ಲಿ ಯಾವುದೇ ಹುರುಳಿರುವುದಿಲ್ಲ. ಕಾಲ ಪರಿಮಿತಿ ಅಧಿನಿಯಮದ ಮೂಲಕ ನಿರ್ದಿಷ್ಟಪಡಿಸಿದ ಅವಧಿಯೊಳಗೆ ದಾವೆಯನ್ನು ಸಲ್ಲಿಸಲಾಗಿದೆಯೆಂದು ಭಾವಿಸಬಹುದಾಗಿರುತ್ತದೆ".

14. ಕಾಲ ಪರಿಮಿತಿ ಅಧಿನಿಯಮದ 58 ಮತ್ತು 65ನೇ ಅನುಚ್ಛೇದಗಳ ಇಡೀ ಉಪಬಂಧಗಳನ್ನು ಹಾಗೂ ಈ ಹಿಂದೆ ಹೇಳಿದಂತೆ ಈ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳು ಘೋಷಿಸಿರುವ ಕಾನೂನನ್ನು ಪರಿಗಣಿಸಿ, 65ನೇ ಅನುಚ್ಛೇದದ ಉಪಬಂಧಗಳು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳ ಮತ್ತು ಸಂದರ್ಭಗಳಿಗೆ ಅನ್ವಯವಾಗುತ್ತವೆಂದು ಹಾಗೂ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದ ಮಾಡಿದಂತೆ 58ನೇ ಅನುಚ್ಛೇದವು ಅನ್ವಯವಾಗುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ತದನುಸಾರವಾಗಿ ಸಲ್ಲಿಸಿದ ದಾವೆಯನ್ನು ಕಾಲ ಪರಿಮಿತಿಯ ಮೂಲಕ ನಿಷೇಧಿತವಲ್ಲವೆಂದು ಅಭಿಪ್ರಾಯಪಟ್ಟು ಪರಿಗಣನೆಗೆ ಸಂಬಂಧಿಸಿದ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

15. ಮೇಲೆ ಹೇಳಿದ ಕಾರಣಗಳ ದೃಷ್ಟಿಯಿಂದ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನಿಗನುಸಾರವಾಗಿರುತ್ತದೆ. ಭಾರತ ಸಂವಿಧಾನದ 226 ಮತ್ತು 227ರ ಅನುಚ್ಛೇದಗಳಡಿಯಲ್ಲಿ ಈ ನ್ಯಾಯಾಲಯವು ಇದರಲ್ಲಿ ಮಧ್ಯೆ ಪ್ರವೇಶಿಸಲು ಯಾವುದೇ ಆಧಾರಗಳಿರುವುದಿಲ್ಲ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ.

---